## ನಿಮ್ಮೊಡನೆ

# ನದಿ-ಗಾಳಿ ಶುದ್ಧತೆಗೆ ‘ಹಸಿರು’ ನಿಶಾನೆ

ಸರ್ಕಾರಗಳೂ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಬಣ್ಣಬಣ್ಣದ ಮಾತುಗಳನ್ನಾಡುತ್ತವೆ. ಆದರೆ, ಪ್ರಸಕ್ತ ರಾಜಕಾರಣದಲ್ಲಿ ಅಭಿವೃದ್ಧಿ ಎನ್ನುವುದು ಮನುಷ್ಯಪರ, ಪ್ರಕೃತಿಪರ ಆಗಿರುವುದರ ಬದಲಿಗೆ ವಾಣಿಜ್ಯಪರ ಎನ್ನುವಂತಾಗಿದೆ.

ನದಿಗಳ ಶುದ್ಧೀಕರಣ ಮತ್ತು ವಾಯುಮಾಲಿನ್ಯಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಎರಡು ಉನ್ನತ ಸಮಿತಿಗಳನ್ನು ರಚಿಸಿರುವ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹ. ಮುಂದಿನ ಆರು ತಿಂಗಳಲ್ಲಿ ನದಿವಲಯಗಳು ಮತ್ತು ನಗರಪ್ರದೇಶಗಳಲ್ಲಿನ ವಾಯುಮಂಡಲವನ್ನು ತಿಳಿಗೊಳಿಸುವ ಗುರಿ ಸರ್ಕಾರದ ಮುಂದಿದೆ. ಈ ಆರು ತಿಂಗಳಲ್ಲಿ ಪವಾಡವನ್ನು ನಿರೀಕ್ಷಿಸುವಂತಿಲ್ಲವಾದರೂ ಪರಿಸರಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ಕೈಗೊಳ್ಳುವ ಯಾವುದೇ ಪುಟ್ಟ ಕ್ರಮವೂ ಸ್ವಾಗತಾರ್ಹ.

ಪರಿಸರದ ಬಗೆಗಿನ ಸರ್ಕಾರದ ದಿಢೀರ್ ಕಾಳಜಿಯ ಹಿಂದೆ ‘ರಾಷ್ಟ್ರೀಯ ಹಸಿರು ನ್ಯಾಯಮಂಡಳಿ’ (ಎನ್‌ಜಿಟಿ) ನೀಡಿರುವ ನಿರ್ದೇಶನವಿದೆ. ಬೆಂಗಳೂರಿನ ವಾಯುಮಾಲಿನ್ಯ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದ್ದು, ಮಾಲಿನ್ಯಪೂರಿತ ಗಾಳಿ ತುಂಬಿಕೊಂಡಿರುವ ದೇಶದ ನಗರಗಳಲ್ಲಿ ಬೆಂಗಳೂರು ಒಂದಾಗಿದೆ. ಮುಂದಿನ ಐದು ವರ್ಷಗಳಲ್ಲಿ ಶೇ. 20–30ರಷ್ಟು ವಾಯುಮಾಲಿನ್ಯವನ್ನು ತಗ್ಗಿಸುವಂತೆ ಕೇಂದ್ರ ಪರಿಸರ ಸಚಿವಾಲಯ ಕೂಡ ಕರ್ನಾಟಕ ಸರ್ಕಾರಕ್ಕೆ ಸೂಚಿಸಿತ್ತು. ಕಳೆದ ಅಕ್ಟೋಬರ್‌ನಲ್ಲಿ ದೇಶದಲ್ಲಿನ 102 ನಗರಗಳಲ್ಲಿನ ವಾಯುಮಾಲಿನ್ಯ ಗೊತ್ತುಪಡಿಸಿದ ಪ್ರಮಾಣಕ್ಕಿಂತಲೂ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ನ್ಯಾಯಮಂಡಳಿ ಮುಂದೆ ಅರ್ಜಿಯೊಂದು ಸಲ್ಲಿಕೆಯಾಗಿತ್ತು. ರಾಜ್ಯದ ಬೆಂಗಳೂರು, ಧಾರವಾಡ, ದಾವಣಗೆರೆ, ಹುಬ್ಬಳ್ಳಿ ಹಾಗೂ ಕಲಬುರ್ಗಿಗಳು ವಾಯುಮಾಲಿನ್ಯ ಹೆಚ್ಚಾಗಿರುವ ನಗರಗಳಲ್ಲಿ ಸೇರಿವೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ. ವಾಯುಮಾಲಿನ್ಯದ ಕಾರಣದಿಂದಾಗಿ ಬೆಂಗಳೂರಿನಲ್ಲಿ ಪ್ರತಿ ವರ್ಷ ಸಾವಿರಾರು ನಾಗರಿಕರು ಅಕಾಲಿಕ ಮರಣ ಹೊಂದುತ್ತಿರುವುದನ್ನೂ ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ. ಈ ದೂರನ್ನು ಗಂಭೀರವಾಗಿ ಪರಿಗಣಿಸಿರುವ ‘ಎನ್‌ಜಿಟಿ’ ವಾಯುವಿನ ಗುಣಮಟ್ಟವನ್ನು ಗಮನಿಸುವ ನಿಟ್ಟಿನಲ್ಲಿ ಸಮಿತಿಯೊಂದನ್ನು ರಚಿಸುವಂತೆ ಆದೇಶಿಸಿತ್ತು.

ರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ವಾಯುಮಂಡಲದಲ್ಲಿನ ಮಾಲಿನ್ಯಕಾರಕಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಹೊಸ ಸಮಿತಿ ಕಾರ್ಯನಿರ್ವಹಿಸಲಿದೆ. ವಾಹನ ದಟ್ಟಣೆ, ಕೈಗಾರಿಕಾ ತ್ಯಾಜ್ಯ, ರಸ್ತೆಯ ದೂಳು, ಕಟ್ಟಡಗಳ ನಿರ್ಮಾಣ ಮತ್ತು ಅವಶೇಷಗಳು – ಇವೆಲ್ಲವುಗಳಿಂದ ಉಂಟಾಗುವ ವಾಯುಮಾಲಿನ್ಯದ ಬಗ್ಗೆ ಸಮಿತಿ ಗಮನಹರಿಸಲಿದೆ. ಮತ್ತೊಂದು ಸಮಿತಿ ನದಿಗಳಲ್ಲಿನ ಮಾಲಿನ್ಯ ನಿಯಂತ್ರಣದ ನಿಟ್ಟಿನಲ್ಲಿ ಕ್ರಿಯಾಶೀಲವಾಗಲಿದೆ. ಕನಿಷ್ಠಪಕ್ಷ ಜನರು ಸ್ನಾನ ಮಾಡುವ ಮಟ್ಟಿಗಾದರೂ ನದಿಗಳನ್ನು ಶುದ್ಧವಾಗಿರಿಸುವ ನಿಟ್ಟಿನಲ್ಲಿ ಸಮಿತಿಯ ಪ್ರಯತ್ನಗಳು ನಡೆಯಲಿವೆ ಎನ್ನಲಾಗಿದೆ. ರಾಜ್ಯದಲ್ಲಿನ 17 ನದಿಗಳ ವಲಯದಲ್ಲಿ ಮಾಲಿನ್ಯದ ಸಮಸ್ಯೆ ತೀವ್ರವಾಗಿದ್ದು, ಇವುಗಳಲ್ಲಿ 7 ನದಿಗಳ ಮಾಲಿನ್ಯದ ಪ್ರಮಾಣ ಆತಂಕ ಹುಟ್ಟಿಸುವಷ್ಟಿದೆ. ಈ ನದಿಗಳನ್ನು ಬಳಸಲು ಯೋಗ್ಯವಾಗುವಂತೆ ಕ್ರಮ ಕೈಗೊಳ್ಳಲು ‘ಎನ್‌ಬಿಟಿ’ ಸೂಚಿಸಿದೆ. ಸರ್ಕಾರ ನೇಮಿಸಿರುವ ಎರಡೂ ಸಮಿತಿಗಳು ನಿರ್ದಿಷ್ಟ ಕಾಲಾವಧಿಯಲ್ಲಿ ಕೈಗೊಳ್ಳಬಹುದಾದ ಕಾರ್ಯೋಪಾಯಗಳ ಕುರಿತಂತೆ ಕ್ರಿಯಾಯೋಜನೆಯನ್ನು ಸಲ್ಲಿಸಲಿವೆ.

ಪರಿಸರ ಸಂರಕ್ಷಣೆಯ ಬಗ್ಗೆ ನ್ಯಾಯಪೀಠಗಳು ಹಾಗೂ ಪರಿಸರವಾದಿಗಳು ಆತಂಕ ವ್ಯಕ್ತಪಡಿಸುವುದು ಹಾಗೂ ಅಂತಹ ಸಂದರ್ಭಗಳಲ್ಲಿ ಸರ್ಕಾರಗಳು ಕಣ್ಣೊರೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹೊಸತೇನಲ್ಲ. ಈ ನಿಟ್ಟಿನಲ್ಲಿ ಕೆರೆಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಪ್ರತಿವರ್ಷ ನಡೆಯುವ ಕಾರ್ಯಕ್ರಮಗಳನ್ನು ಗಮನಿಸಬಹುದು. ಬೆಂಗಳೂರಿನ ಕೆರೆ ಮತ್ತು ರಾಜಕಾಲುವೆಗಳಿಗೆ ಸಂಬಂಧಿಸಿದಂತೆ ‘ಎನ್‌ಜಿಟಿ’ ಗೊತ್ತುಪಡಿಸಿರುವ ಮೀಸಲು ವಲಯ ಈವರೆಗೆ ಕಾರ್ಯರೂಪಕ್ಕೆ ಬಂದಿಲ್ಲ. ‘ಎನ್‌ಜಿಟಿ’ ಆದೇಶವನ್ನು ಪಾಲಿಸಲು ಹೊರಟರೆ, ಕೆರೆ–ರಾಜಕಾಲುವೆಗಳ ಅಂಚಿನಲ್ಲಿ ಈಗಾಗಲೇ ನಿರ್ಮಾಣಗೊಂಡಿರುವ ಸಾಕಷ್ಟು ಮನೆಗಳನ್ನು ಕೆಡವಬೇಕಾಗುತ್ತದೆ ಎನ್ನುವ ಆತಂಕ ಸರ್ಕಾರದ್ದು. ಆದರೆ, ಕೆರೆ–ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಲು ಹೊರಟರೆ ಅದರಿಂದ ಹೆಚ್ಚು ತೊಂದರೆಯಾಗುವುದು ಉದ್ಯಮಿಗಳಿಗೆ ಹಾಗೂ ಪ್ರಭಾವಿಗಳಿಗೆ ಎನ್ನುವುದು ಎಲ್ಲರೂ ಬಲ್ಲ ಸತ್ಯ. ಜನಸಾಮಾನ್ಯರ ಮನೆಗಳ ತೆರವುಗೊಳಿಸಲು ಹಿಂಜರಿಯದ ಆಡಳಿತಯಂತ್ರ, ಪ್ರಭಾವಿಗಳ ಕಟ್ಟಡಗಳು–ಮಾಲ್‌ಗಳು ಎದುರಾದಾಗ ಜಾಣಮರೆವಿಗೆ ಒಳಗಾದ ಉದಾಹರಣೆಗಳು ಸಾಕಷ್ಟಿವೆ.

ಎಲ್ಲ ಸರ್ಕಾರಗಳೂ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಬಣ್ಣಬಣ್ಣದ ಮಾತುಗಳನ್ನಾಡುತ್ತವೆ. ಆದರೆ, ಪ್ರಸಕ್ತ ರಾಜಕಾರಣದಲ್ಲಿ ಅಭಿವೃದ್ಧಿ ಎನ್ನುವುದು ಮನುಷ್ಯಪರ, ಪ್ರಕೃತಿಪರ ಆಗಿರುವುದರ ಬದಲಿಗೆ ವಾಣಿಜ್ಯಪರ ಎನ್ನುವಂತಾಗಿದೆ. ಆ ಕಾರಣದಿಂದಾಗಿಯೇ ಪಶ್ಚಿಮಘಟ್ಟಗಳ ಉಳಿವಿಗೆ ಸಂಬಂಧಿಸಿದಂತೆ ಗಾಡ್ಗೀಳ್ ಅಥವಾ ಕಸ್ತೂರಿರಂಗನ್ ವರದಿಯ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಪ್ರಸ್ತುತ ನದಿಗಳನ್ನು ಶುದ್ಧೀಕರಿಸಲು ಹೊರಟಿರುವ ಸರ್ಕಾರ, ಪರಿಸರದ ವಿಷಯದಲ್ಲಿ ರಾಜಕಾರಣ ಮಾಡದೆ ಇಚ್ಛಾಶಕ್ತಿ ಮತ್ತು ಪ್ರಾಮಾಣಿಕತೆ ಪ್ರದರ್ಶಿಸಬೇಕು ಎನ್ನುವುದು ಪರಿಸರಪ್ರಿಯರ ನಿರೀಕ್ಷೆ.

■ ರಘುನಾಥ ಚ.ಹ.


ಈಶ್ವರ